ದಿನಾಂಕ: 20.09.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಕೆ ವಿ ಡಿ ವಕೀಲರಿಂದಃ**

ನನ್ನ ತಾತನ ಹೆಸರು ಉಗ್ರಪ್ಪ. ಅವರಿಗೆ ಇಬ್ಬರು ಗಂಡುಮಕ್ಕಳು. ಅವರ ಹೆಸರು ಲಕ್ಷ್ಮಿಪತಿಯಪ್ಪ ಮತ್ತು ಹೇಮರೆಡ್ಡಿ. ದಾವಾಸ್ತಿಗಳೆಲ್ಲಾ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿ ಹಿಂದೆ ಪಿತ್ರಾರ್ಜಿತ ಆಸ್ತಿ ಯಾಗಿತ್ತು ನನ್ನ ದೊಡ್ಡಪ್ಪನವರು ಬ್ಯಾಂಕಿನಲ್ಲಿ ಸಾಲ ಇದ್ದು ಹರಾಜಿಗೆ ಬಂದಿದ್ದು ನನ್ನ ತಂದೆ ಸಾಲ ತೀರಿಸಿದ್ದರಿಂದ ನನ್ನ ದೊಡ್ಡಪ್ಪ ಬಿಟ್ಟು ಹೋಗಿದ್ದು 1978 ರಿಂದ ನನ್ನ ತಂದೆ ಸ್ವಾಧೀನದಲ್ಲಿ ಇದೆ ಎಂದು ಹೇಳುತ್ತಾರೆ. ಸಾಲ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರು ಮಾಡಿಲ್ಲ. ದಾವಾಸ್ತಿಗಳು ನನ್ನ ತಂದೆ ಹೆಸರಿಗೆ ಬರುವ ಪೂರ್ವದಲ್ಲಿ ನನ್ನ ತಾತನ ಹೆಸರಿಗೆ ಇತ್ತು. ನನ್ನ ತಂದೆಗೆ ಆಸ್ತಿಗಳುಯಾವ ರೀತಿ ಬಂತು ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ.ಸಾಕ್ಷಿ ಮುಂದುವರೆದು ಬೇರೆ ಪ್ರಕರಣದಲ್ಲಿ ಹಾಜರು ಪಡಿಸಿದ್ದೇನೆ ಎಂದು ಹೇಳುತ್ತಾರೆ .

ನನ್ನ ದೊಡ್ಡಪ್ಪ ಭಾಗ ಬರಬೇಕು ಎಂದು ಈ ದಾವೆ ಸಲ್ಲಿಸಿದ್ದಾರೆ. ಸಾಕ್ಷಿ ಮುಂದುವರೆದು ನನ್ನ ದೊಡ್ಡಪ್ಪ ಸಾಲಕ್ಕಾಗಿ ನನ್ನ ತಂದೆಗೆ ಬರೆದು ಹೋಗಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಅವರ ಜೀವಿತ ಕಾಲದಲ್ಲಿ ಮೂರು ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಕೆಂಚಮ್ಮ ರವರಿಗೆ 3 ಎಕರೆ ಜಮೀನು ನನ್ನ ತಂದೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಹೇಮರೆಡ್ಡಿಯವರಿಗೆ ಮೋಸ ಮಾಡುವ ಉದ್ದೇಶದಿಂದ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಅಣ್ಣನ ಹೆಸರು ನರಸಿಂಹ ಮೂರ್ತಿ . ಅವರ ಮೃತ ಪಟ್ಟಿದ್ದಾರೆ. ಅವರ ಹೆಂಡತಿ ಹೆಸರು ಸುನಂದಮ್ಮ.

**(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು